# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 325+480+547 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್.ಪಿ.ಸುಧಾಮ್ ದಾಸ್<br>ಶ್ರೀ ಶಾಂತರಾಮ್ ಬುಡ್ನ ಸಿದ್ದಿ<br>ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ |
| ಉತ್ತರಿಸುವ ದಿನಾಂಕ | : | 19-07-2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ SCSP-TSP ಯೋಜನೆ ಮೂಲಕ ಇದುವರೆವಿಗೆ ಒಟ್ಟು ಎಷ್ಟು ನಿಗಮಗಳಿಗೆ ಪ್ರಸಕ್ತ ಸಾಲಿನಲ್ಲಿ ಹಣ ಒದಗಿಸಲಾಗಿದೆ; (ಮಂಡಳಿ/ನಿಗಮವಾರು ವಿವರ ಒದಗಿಸುವುದು) | 2024-25ನೇ ಸಾಲಿನಲ್ಲಿ SCSP/TSP ಯೋಜನೆಯಡಿ ವಿವಿಧ ನಿಗಮಗಳಿಗೆ ಹಂಚಿಕೆ ಮಾಡಿರುವ ಅನುದಾನ ಮತ್ತು ಯೋಜನಾವಾರು ವೆಚ್ಚದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | SCSP-TSP ಯೋಜನೆಯಡಿ ಹಣ ಪಡೆಯುತ್ತಿರುವ ಮಂಡಳಿ ಹಾಗೂ ನಿಗಮಗಳ ಪೈಕಿ ಪರಿಶಿಷ್ಟ ಸಮುದಾಯಕ್ಕೆ ಸಂಬಂಧಿಸಿದ ಹಾಗೂ ಸಾಮಾನ್ಯ ವರ್ಗಕ್ಕೆ ಸಂಬಂಧಿಸಿದ ಮಂಡಳಿ/ನಿಗಮ/ಇಲಾಖೆಗಳ ವಿವರ ಒದಗಿಸುವುದು; | |
| ಇ) | ಒದಗಿಸಲಾಗಿರುವ ಹಣದಲ್ಲಿ ಇದುವರೆಗೆ ಪ್ರತಿ ನಿಗಮ/ಮಂಡಳಿಯಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಖರ್ಚಾಗಿದೆ: (ವಿವರ ಒದಗಿಸುವುದು) | |
| ಈ) | SCSP-TSP ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ಎಷ್ಟು; ಹಾಗೂ ಇದುವರೆಗೆ ಬಿಡುಗಡೆಯಾಗಿರುವ ಒಟ್ಟು ಮೊತ್ತ ಎಷ್ಟು; | SCSP/TSP ಅಡಿ 2024-25ನೇ ಸಾಲಿನಲ್ಲಿ ಹಂಚಿಕೆ ಮಾಡಿರುವ ಒಟ್ಟು ಅನುದಾನ ರೂ.39,121.46 ಕೋಟಿ (SCSP ರೂ.27,673.96 ಕೋಟಿ, TSP ರೂ. 11,447.50 ಕೋಟಿ)<br><br>ದಿನಾಂಕ:15.07.2024 ರಂತೆ ಬಿಡುಗಡೆಯಾಗಿರುವ ಮೊತ್ತ ರೂ.7,764.42 ಕೋಟಿ. (ಎಸ್.ಸಿ.ಎಸ್.ಪಿ ರೂ.5706.38 ಕೋಟಿ , ಟಿ.ಎಸ್.ಪಿ ರೂ.2058.04 ಕೋಟಿ) |
| ಉ) | SCSP-TSP ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಒದಗಿಸಲಾಗಿರುವ ಹಣದಲ್ಲಿ ಎಷ್ಟು ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಲಾಗಿದೆ; (ವಿವರ ಒದಗಿಸುವುದು) | 2024-25ನೇ ಸಾಲಿನಲ್ಲಿ SCSP/TSP ಅಡಿ ಒಟ್ಟು ಒದಗಿಸಿರುವ ರೂ.39,121.46 ಕೋಟಿಗಳಲ್ಲಿ ಗ್ಯಾರಂಟಿ ಯೋಜನೆಗಳಿಗೆ ಎಸ್.ಸಿ.ಎಸ್.ಪಿ ಅಡಿ ರೂ.9,980.66 ಕೋಟಿ ಮತ್ತು ಟಿ.ಎಸ್.ಪಿ ಅಡಿ ರೂ.4,301.72 ಕೋಟಿ ಒದಗಿಸಲಾಗಿದ್ದು, ಕಾರ್ಯಕ್ರಮಗಳ ಅನುಷ್ಠಾನ ಪ್ರಗತಿಯಲ್ಲಿದೆ. |

<table>
<tr>
<td>ಊ)</td>
<td>2023-24 ಮತ್ತು 2024-25ನೇ ಸಾಲಿನ ಜೂನ್-2024 ಅಂತ್ಯದವರೆಗೆ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು: (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು)</td>
<td>
2023-24ನೇ ಸಾಲಿನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಎಸ್.ಸಿ.ಎಸ್.ಪಿ ಅಡಿ ರೂ.7,099.61 ಕೋಟಿ ಮತ್ತು ಟಿ.ಎಸ್.ಪಿ ಅಡಿ ರೂ. 3,188.02 ಕೋಟಿ ಒಟ್ಟು ರೂ. 10,287.63 ಕೋಟಿ ಅನುದಾನ ವೆಚ್ಚ ಮಾಡಲಾಗಿದೆ.
2024-25ನೇ ಸಾಲಿನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಎಸ್.ಸಿ.ಎಸ್.ಪಿ ಅಡಿ ರೂ.1,587.09 ಕೋಟಿ ಮತ್ತು ಟಿ.ಎಸ್.ಪಿ ಅಡಿ ರೂ. 641.28 ಕೋಟಿ ಒಟ್ಟು ರೂ. 2,228.37 ಕೋಟಿ ಅನುದಾನ ವೆಚ್ಚ ಮಾಡಲಾಗಿದೆ.
ಸಂಬಂಧಿಸಿದ ಇಲಾಖೆಗಳು ನೀಡಿರುವ ಮಾಹಿತಿಯಂತೆ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ:
<table>
<tr><th rowspan="2">ಯೋಜನೆ</th><th colspan="3">ಫಲಾನುಭವಿಗಳ ಸಂಖ್ಯೆ</th></tr>
<tr><th>SC</th><th>ST</th><th>ಒಟ್ಟು</th></tr>
<tr><td>ಅನ್ನಭಾಗ್ಯ</td><td>71.06 ಲಕ್ಷ</td><td>30.16 ಲಕ್ಷ</td><td>101.22 ಲಕ್ಷ</td></tr>
<tr><td>ಗೃಹಲಕ್ಷ್ಮಿ</td><td>22.45 ಲಕ್ಷ</td><td>8.67 ಲಕ್ಷ</td><td>31.12 ಲಕ್ಷ</td></tr>
<tr><td>ಗೃಹಜ್ಯೋತಿ</td><td>9.86 ಲಕ್ಷ</td><td>4.04 ಲಕ್ಷ</td><td>13.90 ಲಕ್ಷ</td></tr>
<tr><td>ಯುವನಿಧಿ</td><td>28,276</td><td>16,262</td><td>44,538</td></tr>
</table>
ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಶಕ್ತಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಇದುವರೆಗೆ 58.09 ಕೋಟಿ ಸಂಖ್ಯೆಯ ಉಚಿತ ಟಿಕೇಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಿದ್ದು, ಅದರಲ್ಲಿ ಜಾತಿವಾರು ಮಾಹಿತಿ ಸಂಗ್ರಹಿಸಿರುವುದಿಲ್ಲ. ಆದರೆ, ಎಸ್.ಸಿ/ ಎಸ್.ಟಿ ಮಹಿಳಾ ಪ್ರಯಾಣಿಕರು ಸಹ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ.
</td>
</tr>
<tr>
<td>ಋ)</td>
<td>ಪರಿಶಿಷ್ಟ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿ ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ SCSP-TSP ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತಾಗುವುದಿಲ್ಲವೇ ಇದರಿಂದ SCSP-TSP ಕಾಯ್ದೆಯ ಉಲ್ಲಂಘನೆ ಮತ್ತು ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೇ?</td>
<td>
ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಧಿನಿಯಮ 2013ರಂತೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗುವ ಕಾರ್ಯಕ್ರಮಗಳಿಗೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನವನ್ನು ಹಂಚಿಕೆ ಮಾಡಿ ಅನುಷ್ಠಾನಗೊಳಿಸಲು ಅವಕಾಶವಿದೆ.
ಆದ್ದರಿಂದ, ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಿದ್ದು, ಸದರಿ ಮೊತ್ತವನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮಾತ್ರ ವಿನಿಯೋಗಿಸಲಾಗುತ್ತಿದೆ. ಕಾರಣ ಅನುದಾನ ದುರ್ಬಳಕೆಯ ಪ್ರಶ್ನೆ ಉದ್ಭವಿಸುವುದಿಲ್ಲ.
</td>
</tr>
</table>

**ಸಕಇ 221 ಎಸ್‌ಎಲ್‌ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಪಿ ಸುಧಾಮ್ ದಾಸ್,
ಶ್ರೀ ಶಾಂತರಾಮ್ ಬುಡ್ನ ಸಿದ್ದಿ ಮತ್ತು ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 325+480+547 ಕ್ಕೆ ಅನುಬಂಧ

**2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ವಿವಿಧ ನಿಗಮಗಳಿಗೆ ಹಂಚಿಕೆ ಮಾಡಿರುವ ಅನುದಾನ ಮತ್ತು ವೆಚ್ಚದ ವಿವರ**

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಇಲಾಖೆ | ನಿಗಮ / ಮಂಡಳಿಗಳ ಹೆಸರು | ಕಾರ್ಯಕ್ರಮಗಳ ವಿವರ | ಹಂಚಿಕೆ | | | ವೆಚ್ಚ | | |
|---|---|---|---|---|---|---|---|---|---|
| | | | | SCSP | TSP | ಒಟ್ಟು | SCSP | TSP | ಒಟ್ಟು |
| 1 | ಪಶುಸಂಗೋಪನೆ ಇಲಾಖೆ | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ | ಎಸ್.ಸಿ/ ಎಸ್.ಟಿ ಅಭ್ಯರ್ಥಿಗಳಿಗೆ ಕುರಿ ಸಾಕಾಣಿಕೆಗೆ ಸಹಾಯಧನ. | 3.71 | 1.51 | 5.22 | 0.93 | 0.38 | 1.30 |
| | | **ಒಟ್ಟು** | | **3.71** | **1.51** | **5.22** | **0.93** | **0.38** | **1.30** |
| 2 | ವಸತಿ ಇಲಾಖೆ | ರಾಜೀವ್ ಗಾಂಧಿ ವಸತಿ ನಿಗಮ | ಡಾ. ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ & ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ ಎಸ್.ಸಿ/ ಎಸ್.ಟಿ ಜನರ ಮನೆಗಳ ನಿರ್ಮಾಣಕ್ಕೆ ಸಹಾಯಧನ | 921.87 | 531.94 | 1453.81 | 138.00 | 22.82 | 160.82 |
| | | ಕೊಳೆಗೇರಿ ಅಭಿವೃದ್ಧಿ ಮಂಡಳಿ | ಕೊಳಚೆ ಪ್ರದೇಶಗಳ ಸುಧಾರಣೆ | 6.00 | 1.50 | 7.50 | 0.00 | 0.00 | 0.00 |
| | | **ಒಟ್ಟು** | | **927.87** | **533.44** | **1461.31** | **138.00** | **22.82** | **160.82** |
| 3 | ಯೋಜನಾ ಮತ್ತು ಸಾಂಖ್ಯಿಕ ಇಲಾಖೆ | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ | ಅನುಚ್ಛೇದ 371 ಜೆ-ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ | 642.86 | 267.86 | 910.72 | 0.00 | 0.00 | 0.00 |
| | | ಕರಾವಳಿ ಅಭಿವೃದ್ಧಿ ಪ್ರಾಧಿಕಾರ | ಕರಾವಳಿ ಅಭಿವೃದ್ಧಿ ಪ್ರಾಧಿಕಾರ | 1.80 | 0.73 | 2.53 | 0.00 | 0.00 | 0.00 |
| | | ಬಯಲುಸೀಮೆ ಅಭಿವೃದ್ಧಿ ಮಂಡಳಿ | ಬಯಲುಸೀಮೆ ಅಭಿವೃದ್ಧಿ ಮಂಡಳಿ | 6.77 | 2.75 | 9.52 | 0.00 | 0.00 | 0.00 |
| | | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ | 5.66 | 2.29 | 7.95 | 0.00 | 0.00 | 0.00 |
| | | **ಒಟ್ಟು** | | **657.09** | **273.63** | **930.72** | **0.00** | **0.00** | **0.00** |
| | ಸಮಾಜ ಕಲ್ಯಾಣ ಇಲಾಖೆ | ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ | ವಿವಿಧ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗೆ ಸಹಾಯಧನ ಮತ್ತು ತರಬೇತಿ | 36.00 | 0.00 | 36.00 | 0.00 | 0.00 | 0.00 |
| | | ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ | ಸ್ವಯಂ ಉದ್ಯೋಗ ಮತ್ತು ಕಿರುಸಾಲ ಯೋಜನೆಗಳಿಗೆ | 35.00 | 0.00 | 35.00 | 0.00 | 0.00 | 0.00 |

| ಕ್ರ.ಸಂ | ಇಲಾಖೆ | ನಿಗಮ / ಮಂಡಳಿಗಳ ಹೆಸರು | ಕಾರ್ಯಕ್ರಮಗಳ ವಿವರ | ಹಂಚಿಕೆ | | | [illegible] | | |
|---|---|---|---|---|---|---|---|---|---|
| | | | | SCSP | TSP | ಒಟ್ಟು | SCSP | TSP | ಒಟ್ಟು |
| 4 | ಸಮಾಜ ಕಲ್ಯಾಣ ಇಲಾಖೆ | ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ | ಗಂಗಾ ಕಲ್ಯಾಣ, ಭೂಒಡೆತನ, ಸ್ವಯಂ ಉದ್ಯೋಗ ಮತ್ತು ಕಿರುಸಾಲ ಯೋಜನೆಗಳಿಗೆ | 65.00 | 0.00 | 65.00 | 0.00 | 0.00 | 0.00 |
| | | ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | | 115.00 | 0.00 | 115.00 | 0.00 | 0.00 | 0.00 |
| | | ಕರ್ನಾಟಕ ಆದಿಜಾಂಭವ ಅಭಿವೃದ್ಧಿ ನಿಗಮ | | 89.00 | 0.00 | 89.00 | 0.00 | 0.00 | 0.00 |
| | | ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | | 76.00 | 0.00 | 76.00 | 0.00 | 0.00 | 0.00 |
| | | ಅಲೆಮಾರಿ ಅಭಿವೃದ್ಧಿ ನಿಗಮ | | 30.00 | 0.00 | 30.00 | 0.00 | 0.00 | 0.00 |
| | ಒಟ್ಟು | | | **446.00** | **0.00** | **446.00** | **0.00** | **0.00** | **0.00** |
| 5 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | ವಾಲ್ಮೀಕಿ ಅಭಿವೃದ್ಧಿ ನಿಗಮ | ಗಂಗಾ ಕಲ್ಯಾಣ, ಭೂಒಡೆತನ, ಸ್ವಯಂ ಉದ್ಯೋಗ ಮತ್ತು ಕಿರುಸಾಲ ಯೋಜನೆಗಳಿಗೆ | 0.00 | 175.00 | 175.00 | 0.00 | 0.00 | 0.00 |
| | ಒಟ್ಟು | | | **0.00** | **175.00** | **175.00** | **0.00** | **0.00** | **0.00** |
| 6 | ಸಾರಿಗೆ ಇಲಾಖೆ | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ | ಎಸ್.ಸಿ./ ಎಸ್.ಟಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ,ಪ.ಜಾತಿ/ ಪ.ಪಂಗಡದ ಅಭ್ಯರ್ಥಿಗಳಿಗೆ ತರಬೇತಿ ಮತ್ತು ತರಬೇತಿ ಕೇಂದ್ರಗಳ ನಿರ್ಮಾಣ | 43.54 | 7.97 | 51.51 | 9.17 | 1.30 | 10.47 |
| | | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | ಮೇಲಿನಂತೆ | 52.15 | 24.84 | 76.99 | 12.39 | 5.95 | 18.34 |
| | | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | ಮೇಲಿನಂತೆ | 84.18 | 39.72 | 123.90 | 19.33 | 9.24 | 28.57 |
| | | ವಾಯುವ್ಯ ಕರ್ನಾಟಕ ಪ್ರಾದೇಶಿಕ ರಸ್ತೆ ಸಾರಿಗೆ ಸಂಸ್ಥೆ | ಮೇಲಿನಂತೆ | 37.25 | 18.89 | 56.14 | 7.60 | 4.03 | 11.63 |
| | ಒಟ್ಟು | | | **217.12** | **91.42** | **308.54** | **48.49** | **20.51** | **69.00** |
| 7 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮ | ಚೇತನ ಮತ್ತು ದೇವದಾಸಿ ಮಹಿಳೆಯರ ಪುರ್ನವಸತಿ | 2.60 | 0.40 | 3.00 | 0.00 | 0.00 | 0.00 |
| | | | ಮಹಿಳಾ ಉದ್ಯಮಿಗಳಿಗೆ ತರಬೇತಿ ಯೋಜನೆ | 0.20 | 0.08 | 0.28 | 0.00 | 0.00 | 0.00 |
| | | | ಉದ್ಯೋಗಿನಿ | 1.28 | 1.28 | 2.56 | 0.00 | 0.00 | 0.00 |
| | ಒಟ್ಟು | | | **4.08** | **1.76** | **5.84** | **0.00** | **0.00** | **0.00** |

| ಕ್ರ.ಸಂ | ಇಲಾಖೆ | ನಿಗಮ / ಮಂಡಳಿಗಳ ಹೆಸರು | ಕಾರ್ಯಕ್ರಮಗಳ ವಿವರ | ಹಂಚಿಕೆ | | | ವೆಚ್ಚ | | |
|---|---|---|---|---|---|---|---|---|---|
| | | | | SCSP | TSP | ಒಟ್ಟು | SCSP | TSP | ಒಟ್ಟು |
| 8 | ಸಣ್ಣ ಕೈಗಾರಿಕೆ | ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೈಗಾರಿಕಾ ನಿವೇಶನಕ್ಕೆ ಸಹಾಯಧನ | 320.00 | 80.00 | 400.00 | 80.00 | 20.00 | 100.00 |
| | | | **ಒಟ್ಟು** | **320.00** | **80.00** | **400.00** | **80.00** | **20.00** | **100.00** |
| | | | **ಒಟ್ಟು** | **2575.87** | **1156.76** | **3732.63** | **267.42** | **63.71** | **331.13** |